# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 63+5

**ಸದಸ್ಯರ ಹೆಸರು** : ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಹಾಗೂ ಶ್ರೀ ಕೆ.ಪ್ರತಾಪ್ ಸಿಂಹ ನಾಯಕ (ವಿಧಾನ ಸಭೆಯಿಂದ ಚುನಾಯಿತರಾದವರು)

**ಉತ್ತರಿಸುವ ದಿನಾಂಕ** : 11.08.2025

**ಉತ್ತರಿಸುವವರು** : ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಆನೆ ದಾಳಿಯಿಂದ ಎಷ್ಟು ಜನ ರೈತರು/ ಸಾರ್ವಜನಿಕರು ಸಾವನ್ನಪ್ಪಿದ್ದಾರೆ: (ಜಿಲ್ಲಾವಾರು ಸಂಪೂರ್ಣವಾಗಿ ಮಾಹಿತಿ ನೀಡುವುದು) | ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಆನೆ ದಾಳಿಯಿಂದ ಮೃತಪಟ್ಟಿರುವ ರೈತರು/ ಸಾರ್ವಜನಿಕರ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-01 ರಲ್ಲಿ ಒದಗಿಸಲಾಗಿದೆ. |
| (ಆ) | ಕಳೆದ 3 ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಎಷ್ಟು ಜನ ಆನೆ ದಾಳಿಯಿಂದ ಸಾವನ್ನಪ್ಪಿದ್ದಾರೆ: ಆನೆ ದಾಳಿಯಿಂದ ಸಾವುಂಟಾದ ಎಷ್ಟು ಕುಟುಂಬಗಳಿಗೆ ಮತ್ತು ಎಷ್ಟು ಮೊತ್ತದ ಪರಿಹಾರವನ್ನು ಒದಗಿಸಲಾಗಿದೆ: (ವಿವರವನ್ನು ಒದಗಿಸುವುದು) | ಕಳೆದ 3 ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆನೆ ದಾಳಿಯಿಂದ 04 ಜನರು ಮೃತಪಟ್ಟಿರುತ್ತಾರೆ. ಉಡುಪಿ ಜಿಲ್ಲೆಯಲ್ಲಿ ಆನೆ ದಾಳಿಯಿಂದ ಸಾವನ್ನಪ್ಪಿರುವ ಯಾವುದೇ ಪ್ರಕರಣ ವರದಿಯಾಗಿರುವುದಿಲ್ಲ. ಕಳೆದ ಮೂರು ವರ್ಷಗಳಲ್ಲಿ ಆನೆ ದಾಳಿಯಿಂದ ಮೃತಪಟ್ಟವರ ಕುಟುಂಬದ ವಾರಸುದಾರರಿಗೆ ನೀಡಲಾದ ಪರಿಹಾರ ಮೊತ್ತದ ವಿವರ ಈ ಕೆಳಕಂಡಂತಿರುತ್ತದೆ. |

| ಕ್ರ ಸಂ | ವರ್ಷ | ಮೃತಪಟ್ಟವರ ಹೆಸರು & ವಿಳಾಸ | ಪಾವತಿಸಿರುವ ಪರಿಹಾರಧನ (ಲಕ್ಷಗಳಲ್ಲಿ) | ಮೃತರ ಕುಟುಂಬಸ್ಥರಿಗೆ ಪಾವತಿಸಿದ ಮಾಸಾಶನದ ವಿವರ (ರೂ.ಗಳಲ್ಲಿ) |
|---|---|---|---|---|
| 1 | 2022-23 | ಶ್ರೀ ತಿಮ್ಮಪ್ಪ ಬಿನ್ ಪೋಡಿಯಾ, ಜನತಾ ಕಾಲೊನಿ ಶಿರಾಡಿ ಗ್ರಾಮ, ಕಡಬ ತಾಲೂಕು | 15.00 | 1,20,133/- |
| 2 | | ಕು॥ ರಂಜಿತಾ ನೈಲ ನಿವಾಸಿ, ರೆಂಜಿಲಾಡಿ ಗ್ರಾಮ, ಕಡಬ ತಾಲೂಕು | 15.00 | 1,13,333/- |
| 3 | | ಶ್ರೀ ರಮೇಶ್ ರೈ, ರೆಂಜಿಲಾಡಿ ಗ್ರಾಮ, ಕಡಬ ತಾಲೂಕು | - | - |
| 4 | 2023-24 | ಶ್ರೀ ಚೋಮ, ಬಿನ್. ಓಡಿ ಮುಗೇರ, ಗೇರ್ತಿಲ ಮನೆ, ಐತ್ತೂರು ಗ್ರಾಮ, ಕಡಬ ತಾಲೂಕು | 15.00 | 79,200/- |
| 5 | 2024-25 | - | - | - |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>2022-23ನೇ ಸಾಲಿನಲ್ಲಿ ಮಾನವ ಸಾವಿಗೆ ಸಂಬಂಧಪಟ್ಟ 03 ಪ್ರಕರಣಗಳಲ್ಲಿ 02 ಪ್ರಕರಣಗಳಿಗೆ ಮಾತ್ರ ಪರಿಹಾರ ಧನ ಪಾವತಿಸಲಾಗಿದ್ದು, ಶ್ರೀ ರಮೇಶ್ ರೈ, ಬಿನ್. ತಿಮ್ಮಣ್ಣ ರೈ ಇವರು ಕಾಡಾನೆ ದಾಳಿಯಿಂದ ಮೃತಪಟ್ಟಿದ್ದು, ಸದರಿಯವರು ಅವಿವಾಹಿತರಾಗಿರುತ್ತಾರೆ ಅವರ ತಂದೆ ತಾಯಿಗಳು ಮೃತ ಪಟ್ಟಿರುವುದರಿಂದ ಮೃತರಿಗೆ ಸಂಬಂಧಪಟ್ಟ ರಕ್ತ ಸಂಬಂಧಿಗಳು ಯಾರು ಇಲ್ಲವೆಂದು ತಹಶೀಲ್ದಾರ್, ಕಡಬ ಇವರು ವರದಿಸಿರುವುದರಿಂದ ಪರಿಹಾರಧನವನ್ನು ಪಾವತಿಸಿರುವುದಿಲ್ಲ.<br><br>2025-26ನೇ ಸಾಲಿನಲ್ಲಿ ಕಾಡಾನೆ ದಾಳಿಯಿಂದ 02 ಜನರು ಮೃತಪಟ್ಟಿರುತ್ತಾರೆ. ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ 01 ಪ್ರಕರಣದಲ್ಲಿ ಮೃತಪಟ್ಟ ಶ್ರೀಮತಿ ಸೆಲ್ಲಮ್ಮ, ಕೋಂ. ತಿಲಗಂ, ಕೆಯ್ಯೂರು ಮನೆ, ಕೊಳ್ತಿಗೆ ಗ್ರಾಮ, ಪುತ್ತೂರು ತಾಲೂಕು ಇವರ ಕುಟುಂಬದ ವಾರಸುದಾರರಿಗೆ ರೂ.20.00 ಲಕ್ಷ ಪರಿಹಾರಧನ ಪಾವತಿಸಲಾಗಿರುತ್ತದೆ ಹಾಗು ಇನ್ನೊಂದು ಪ್ರಕರಣವಾದ ಶ್ರೀ ಬಾಲಕೃಷ್ಣ ಶೆಟ್ಟಿ ಇವರ ಮರಣೋತ್ತರ ಪರೀಕ್ಷೆ, ಪೊಲೀಸ್ ವರದಿ ಮತ್ತು ಕಂದಾಯ ದಾಖಲೆಗಳು ನಿರೀಕ್ಷೆಯಲ್ಲಿದ್ದು ಸ್ವೀಕೃತಿಯಾದ ಕೂಡಲೇ ಪರಿಹಾರ ಧನ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.</td></tr>
<tr><td>ಇ)</td><td>ಆನೆ ದಾಳಿಯಿಂದ ನಿರಂತರ ಕೃಷಿ, ಬೆಳೆ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಈವರೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಆನೆಗಳಿಂದ ಹಾನಿಗೆ ಒಳಗಾದ ಕೃಷಿಕರಿಗೆ ಎಷ್ಟು ಪರಿಹಾರವನ್ನು ಒದಗಿಸಲಾಗಿದೆ: (ಸಂಪೂರ್ಣ ವಿವರವನ್ನು ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಆನೆ ದಾಳಿಯಿಂದ ಹಾನಿಯಾದ ಬೆಳೆಗಳಿಗೆ ನೀಡಲಾದ ಪರಿಹಾರದ ಮೊತ್ತದ ವಿವರ ಈ ಕೆಳಕಂಡಂತಿರುತ್ತದೆ.<br><br>
<table>
<tr><th>ಕ್ರ. ಸಂ.</th><th>ವರ್ಷ</th><th>ಫಲಾನುಭವಿಗಳ ಸಂಖ್ಯೆ</th><th>ಪರಿಹಾರ ನೀಡಿದ ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>2022-23</td><td>250</td><td>45,75,971/-</td></tr>
<tr><td>2</td><td>2023-24</td><td>270</td><td>72,09,578/-</td></tr>
<tr><td>3</td><td>2024-25</td><td>397</td><td>1,00,81,667/-</td></tr>
</table>
<br>2025-26ನೇ ಸಾಲಿನಲ್ಲಿ 113 ಪ್ರಕರಣಗಳಿಗೆ ರೂ.32,85,362/-ಗಳನ್ನು ಪರಿಹಾರ ಪಾವತಿಸಲಾಗಿರುತ್ತದೆ.</td></tr>
<tr><td>ಈ)</td><td>ಯಾವ ಕಾಲಮಿತಿಯೊಳಗೆ, ಕಾಡಾನೆಗಳ ಹಾವಳಿಗೆ ಶಾಶ್ವತ ಪರಿಹಾರ ಕಲ್ಪಿಸಲಾಗುವುದು: ಹಾಗೂ ಕೃಷಿಕರು ತಮ್ಮ ತೋಟಗಳಲ್ಲಿ ಬೆಳೆಯುತ್ತಿರುವ ಬೆಳೆಗಳ ಕೃಷಿ ಉತ್ಪತ್ತಿಗಳು ಅವರಿಗೆ ಪೂರ್ಣ ಪ್ರಮಾಣದಲ್ಲಿ ಸಿಗುವಂತೆ ಮಾಡಲು ಯಾವಾಗ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು:</td><td>ಕಾಡಾನೆಗಳು ಅರಣ್ಯದಿಂದ ಗ್ರಾಮಗಳಿಗೆ ಪ್ರವೇಶಿಸುವುದನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>1. ಅರಣ್ಯದ ಅಂಚಿನಲ್ಲಿ ಬರುವ ಖಾಸಗಿ ಜಮೀನುಗಳ ಸುತ್ತಾ ಸರಕಾರದ ವತಿಯಿಂದ ಶೇ.50 ಸಬ್ಸಿಡಿಯನ್ನು ಬಳಸಿಕೊಂಡು ಸೌರಶಕ್ತಿ ಬೇಲಿಯನ್ನು ನಿರ್ಮಿಸಲಾಗುತ್ತಿದೆ.<br>2. ಅರಣ್ಯ ರಕ್ಷಣೆ ಕ್ಯಾಂಪಿನ ಸಿಬ್ಬಂದಿಗಳನ್ನು ಆನೆ ಹಾವಳಿ ಸಮಯದಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ.<br>3. ಆನೆ ನಿರೋಧಕ ಕಂದಕ ನಿರ್ಮಿಸಲಾಗಿದೆ, ಹಳ್ಳ, ತೊರೆಗಳು ಬರುವಲ್ಲಿ ವಿಶೇಷ ವಿನ್ಯಾಸದ ಕಾಂಕ್ರಿಟ್ ರಚನೆ ಮತ್ತು ಸೋಲಾರ್ ಟೆಂಟಕಲ್ ಬೇಲಿಯ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ.</td></tr>
</table>

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>4. ಆನೆ ಸಂಚರಿಸುವ ಪ್ರದೇಶಗಳಲ್ಲಿ ಸೂಚನಾ ಫಲಕವನ್ನು ಅಳವಡಿಸಲಾಗುತ್ತಿದೆ.<br>5. ಇಲಾಖಾ ಸಿಬ್ಬಂದಿಗಳಿಂದ ನಿರಂತರವಾಗಿ ಗಸ್ತು ಸಂಚರಿಸಿ ಕಾಡಾನೆಯು ಗ್ರಾಮಗಳಿಗೆ ದಾಳಿ ಮಾಡಿದಾಗ ಮರಳಿ ಅರಣ್ಯಕ್ಕೆ ಹಿಮ್ಮೆಟ್ಟಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.<br>6. ಕಾಡಾನೆ ಹಾವಳಿ ಇರುವ ಗ್ರಾಮಗಳಲ್ಲಿ ಸ್ಥಳೀಯ ಗ್ರಾಮಸ್ಥರ, ಅಧಿಕಾರಿ / ಸಿಬ್ಬಂದಿಗಳ ವಾಟ್ಸಪ್ ಗ್ರೂಪ್ ರಚಿಸಿ, ಆನೆ ಹಾವಳಿ ಬಗ್ಗೆ ಸಂದೇಶವನ್ನು ಸ್ಥಳೀಯರಿಗೆ ರವಾನಿಸಲು ಕ್ರಮಕೈಗೊಳ್ಳಲಾಗಿದೆ.</td></tr>
<tr><td>ಉ)</td><td>ಕಾಡಾನೆಗಳ ಹಾವಳಿಯನ್ನು ಶಾಶ್ವತವಾಗಿ ನಿಯಂತ್ರಿಸಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ದೂರ ಆನೆ ಕಂದಕ ಮತ್ತು ಸೋಲಾರ್ ಬೇಲಿಗಳನ್ನು ನಿರ್ಮಿಸಲಾಗಿದೆ; ಮುಂದಿನ ದಿನಗಳಲ್ಲಿ ಸದರಿ ಜಿಲ್ಲೆಗಳಲ್ಲಿ ಈ ನಿಟ್ಟಿನಲ್ಲಿ ಏನು ಕ್ರಿಯಾ ಯೋಜನೆ ರೂಪಿಸಲಾಗಿದೆ: (ಸಂಪೂರ್ಣ ವಿವರ ನೀಡುವುದು)</td><td>ಕಾಡಾನೆಗಳ ಹಾವಳಿಯನ್ನು ನಿಯಂತ್ರಿಸಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 05 ವರ್ಷಗಳಲ್ಲಿ ನಿರ್ಮಾಣ ಮಾಡಲಾಗಿರುವ ಆನೆ ಕಂದಕ, ಸೋಲಾರ್ ಬೇಲಿಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ವರ್ಷ</th><th>ಆನೆ ನಿರೋಧಕ ಕಂದಕ (ಕಿ.ಮೀ ಗಳಲ್ಲಿ)</th><th>ವಿಶೇಷ ವಿನ್ಯಾಸದ ಕಾಂಕ್ರೀಟ್ ಪಿಲ್ಲರ್‌ಗಳನ್ನು ಅಳವಡಿಸುವುದು (ಆರ್.ಎಂ.ಟಿ ಗಳಲ್ಲಿ)</th><th>ಸೋಲಾರ್ ಫೆನ್ಸಿಂಗ್ (ಕಿ.ಮೀಗಳಲ್ಲಿ)</th><th>ಸೋಲಾರ್ ಡಬ್ಬಲ್ ಲೈನ್ ಟೆಂಟಕಲ್ ಫೆನ್ಸಿಂಗ್ (ಕಿ.ಮೀಗಳಲ್ಲಿ)</th></tr>
<tr><td>1</td><td>2</td><td>3</td><td>4</td><td>5</td><td>6</td></tr>
<tr><td>1</td><td>2020-21</td><td>9.27</td><td>105.55</td><td>0.87</td><td>-</td></tr>
<tr><td>2</td><td>2021-22</td><td>6.63</td><td>297.90</td><td>-</td><td>-</td></tr>
<tr><td>3</td><td>2022-23</td><td>23.55</td><td>800.00</td><td>10.60</td><td>10.00</td></tr>
<tr><td>4</td><td>2023-24</td><td>9.50</td><td>344.07</td><td>3.52</td><td>9.00</td></tr>
<tr><td>5</td><td>2024-25</td><td>5.18</td><td>137.70</td><td>7.60</td><td>8.18</td></tr>
<tr><td></td><td>ಒಟ್ಟು</td><td>54.13</td><td>1,685.22</td><td>22.59</td><td>27.18</td></tr>
</table>
2025-26ನೇ ಸಾಲಿನಲ್ಲಿ 1.50 ಕಿ.ಮೀ ಆನೆ ನಿರೋಧಕ ಕಂದಕ, 39 ಸಂಖ್ಯೆಯ ವಿಶೇಷ ವಿನ್ಯಾಸದ ಕಾಂಕ್ರೀಟ್ ಪಿಲ್ಲರ್ ಹಾಗು 9.00 ಕಿ.ಮೀ ಸೋಲಾರ್ ಡಬ್ಬಲ್ ಲೈನ್ ಟೆಂಟಕಲ್ ಫೆನ್ಸಿಂಗ್ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ.<br><br>ಮುಂದುವರಿದು, ಮಾನವ – ಆನೆ ಸಂಘರ್ಷವನ್ನು ತಡೆಗಟ್ಟುವ ನಿಟ್ಟಿನಲ್ಲಿ 117.20 ಕಿ.ಮೀ ಆನೆತಡೆ ಕಂದಕ, 2630 ಸಂಖ್ಯೆಯ ವಿಶೇಷ ವಿನ್ಯಾಸದ ಕಾಂಕ್ರೀಟ್ ಪಿಲ್ಲರ್‌ಗಳನ್ನು 71.44 ಕಿ.ಮೀ ಸೋಲಾರ್ ತಂತಿ ಬೇಲಿ ಹಾಗೂ 73.50 ಕಿ.ಮೀ ಸೋಲಾರ್ ಡಬ್ಬಲ್ ಲೈನ್ ಟೆಂಟಕಲ್ ಫೆನ್ಸಿಂಗ್ ಕಾಮಗಾರಿ ಕೈಗೊಳ್ಳುವ ಪ್ರಸ್ತಾವನೆಯಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಅನುದಾನ ಲಭ್ಯತೆ ಅನುಸಾರ ಕಾಮಗಾರಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| ಊ) | ರಾಜ್ಯದ ಬೇರೆ ಜಿಲ್ಲೆಗಳಲ್ಲಿರುವಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಕ್ಷಿಸಲು ಕಾಡಾನೆ ದಾಳಿಯಿಂದ ರಕ್ಷಿಸಲು ತುರ್ತು ಸಹಾಯವಾಣಿ. ಸ್ಪಂದನ ಪಡೆ ಹಾಗೂ ಕಾಡಾನೆಗಳನ್ನು ಸೆರೆಹಿಡಿದು ಪಳಗಿಸುವ ಆನೆ ಶಿಬಿರವನ್ನು ಸ್ಥಾಪಿಸುವ ಬಗ್ಗೆ ಸರ್ಕಾರದ ನಿಲುವೇನು? | • ಮಾನವ- ಆನೆ ಸಂಘರ್ಷ ಹೆಚ್ಚಿರುವ 10 ಜಿಲ್ಲೆಗಳಲ್ಲಿ **"ಆನೆ ಎಲ್ಲಿ"** ಎಂಬ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯು ಸಾರ್ವಜನಿಕ ದೂರುಗಳು, ಗಸ್ತು ತಿರುಗುವಿಕೆ ಮುಂತಾದ ವಿವಿಧ ಮಾಹಿತಿಗಳ ಮೂಲಕ ಒಂದು ಪ್ರದೇಶದಲ್ಲಿ ಆನೆಗಳ ಚಲನವಲನವನ್ನು ಮೇಲ್ವಿಚಾರಣೆ ಮಾಡುತ್ತದೆ. ಈ ಮಾಹಿತಿಯು ಆನೆಗಳ ಚಲನವಲನದ ಮಾದರಿಯನ್ನು ಪತ್ತೆಹಚ್ಚಲು ಮತ್ತು ಸಾರ್ವಜನಿಕರಿಗೆ ಮುಂಚಿನ ಎಚ್ಚರಿಕೆ ಸಂದೇಶಗಳನ್ನು ಕಳುಹಿಸಲು ಸಹಾಯ ಮಾಡುತ್ತಿದೆ. **ಸದರಿ ತಂತ್ರಜ್ಞಾನವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.**<br><br>• ರಾಜ್ಯದಲ್ಲಿ ಮಾನವ- ಆನೆ ಸಂಘರ್ಷ ಉಂಟಾಗುವ ಸಂದರ್ಭಗಳಲ್ಲಿ ಕಾಡಾನೆಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಗಾಗಿ ದುಬಾರೆ, ಮತ್ತಿಗೋಡು, ಬಳ್ಳೆ, ಹಾರಂಗಿ, ಭೀಮನಕಟ್ಟೆ, ಸಕ್ರೆಬೈಲು ಮತ್ತು ರಾಮಾಪುರ ಆನೆ ಶಿಬಿರಗಳಲ್ಲಿನ ಪಳಗಿದ ಆನೆಗಳನ್ನು ಬಳಸಿಕೊಂಡು ನುರಿತ ಪಶು ವೈದ್ಯಾಧಿಕಾರಿ, ಮಾವುತ ಹಾಗೂ ಇತರ ಸಿಬ್ಬಂದಿಗಳನ್ನೊಳಗೊಂಡ ಮೂರು ತಂಡಗಳನ್ನು ರಚಿಸಲಾಗಿರುತ್ತದೆ. ಸದರಿ ತಂಡವು ರಾಜ್ಯದ ಯಾವುದೇ ಭಾಗದಿಂದ ಕಾಡಾನೆ ಸೆರೆಹಿಡಿಯುವ ಕಾರ್ಯಾಚರಣೆಗೆ ಬೇಡಿಕೆ ಬಂದಾಗ ಈ ತಂಡಗಳಲ್ಲಿ ಒಂದ ತಂಡವನ್ನು ಕಾರ್ಯಾಚರಣೆಗೆ ನಿಯೋಜಿಸಲಾಗುತ್ತಿದೆ. |

ಸಂಖ್ಯೆ: ಅಪಜೀ 164 ಎಫ್‌ಡಬ್ಲ್ಯೂಎಲ್ 2025

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

ಅನುಬಂಧ-1

| ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಆನೆ ದಾಳಿಯಿಂದ ರೈತರು ಮತ್ತು ಸಾರ್ವಜನಿಕರು ಸಾವನ್ನಪ್ಪಿರುವ ಜಿಲ್ಲಾವಾರು ವಿವರ | | | | | |
|---|---|---|---|---|---|
| ಕ್ರ. ಸ | ಜಿಲ್ಲೆ | ವರ್ಷ | | | |
| | | 2022-23 | 2023-24 | 2024-25 | 2025-26 |
| 1 | ಕೊಡಗು | 6 | 11 | 7 | 3 |
| 2 | ಚಾಮರಾಜನಗರ | 7 | 12 | 4 | 2 |
| 3 | ಬೆಂಗಳೂರು/ನಗರ/ ಗ್ರಾಮಾಂತರ/ ಬನ್ನೇರುಘಟ್ಟ | 5 | 3 | 2 | - |
| 4 | ರಾಮನಗರ | 1 | 7 | 2 | - |
| 5 | ಕೋಲಾರ | 1 | - | 4 | - |
| 6 | ಹಾಸನ | 4 | 4 | 6 | 2 |
| 7 | ತುಮಕೂರು | - | - | - | |
| 8 | ಮೈಸೂರು | 1 | 3 | 4 | 1 |
| 9 | ಮಂಡ್ಯ | - | 1 | - | |
| 10 | ಚಿಕ್ಕಮಗಳೂರು | 3 | 5 | 5 | 2 |
| 12 | ಶಿವಮೊಗ್ಗ | 1 | 1 | 2 | 1 |
| 13 | ದಕ್ಷಿಣ ಕನ್ನಡ | 3 | 1 | - | 2 |
| **Total** | | **32** | **48** | **36** | **13** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು
ಕರ್ನಾಟಕ, ಬೆಂಗಳೂರು.